

# ಪಾಪ ಪುಣ್ಯದ ಸುಳಿಯಲ್ಲಿ ಅವತಾರ ಪುರುಷ



ಮನರಂಜನೆಯ ಚೌಕಟ್ಟಿನೊಳಗೇ ಪ್ರಯೋಗಗಳಿಗೆ ಒಡ್ಡಿಕೊಳ್ಳುವ ನಿರ್ದೇಶಕ ಸಿಂಪಲ್ ಸುನಿ. ಇದೀಗ ಅವರು 'ಅವತಾರ ಪುರುಷ' ಚಿತ್ರದ ಮೂಲಕ ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ. ಚಿತ್ರದ ಹೆಸರು ಪುರಾಣದ ಕಥೆಯೊಂದರ ಸೂಚನೆಯಂತೆ ಕಾಣುತ್ತಿದ್ದರೆ, ಚಿತ್ರದ ಪಾತ್ರವರ್ಗದತ್ತ ದೃಷ್ಟಿ ಹಾಯಿಸಿದರೆ ಅದಕ್ಕೆ ವಿರುದ್ಧವಾದ ಚಿತ್ರಣವೊಂದು ಕಾಣಸಿಗುತ್ತದೆ. ಇತ್ತೀಚೆಗೆ ಹಾಸ್ಯ ಚಿತ್ರಗಳ ಮೂಲಕ ಸರಣಿ ಗೆಲುವು ದಾಖಲಿಸುತ್ತಿರುವ ಶರಣ್ ಈ ಚಿತ್ರದ ನಾಯಕ. ಪೌರಾಣಿಕ ಸಿನಿಮಾದಲ್ಲಿ ಶರಣ್ ಅವರನ್ನು ನಾಯಕನಾಗಿ ಊಹಿಸಿಕೊಳ್ಳುವುದೂ ಕಷ್ಟ ಅಲ್ಲವೇ? ಅವರಿಗೆ ಜತೆಯಾಗಿ ಆಶಿಕಾ ರಂಗನಾಥ್ ಕೂಡ ಇದ್ದಾರೆ.

ಈ ಕುರಿತು ಕೇಳಿದರೆ ನಿರ್ದೇಶಕ ಸುನಿ ಇನ್ನಷ್ಟು ಗೊಂದಲಕ್ಕೆ ಕೆಡವುತ್ತಾರೆ. 'ಶರಣ್ ಅವರ ಪ್ಲಸ್ ಪಾಯಿಂಟ್ ಎಂದರೆ ಹಾಸ್ಯ. ಅವರ ಚಿತ್ರಗಳಲ್ಲಿ ಸಾಮಾನ್ಯವಾಗಿ ಇರುವ ಹಾಸ್ಯ ಈ ಚಿತ್ರದಲ್ಲಿಯೂ ಇರುತ್ತದೆ' ಎನ್ನುತ್ತಾರೆ.

ಸದ್ಯಕ್ಕೆ ಕೇರಳದ ಹಳೆಯ ಮನೆಯೊಂದರಲ್ಲಿ 'ಅವತಾರ ಪುರುಷ'ನ ಚಿತ್ರೀಕರಣ ನಡೆಯುತ್ತಿದೆ. 'ಈ ಚಿತ್ರದ ಕಥೆಗೆ ಹಳೆಯ, ಸಾಂಪ್ರದಾಯಿಕ ನೋಟವುಳ್ಳ ಮನೆ ಬೇಕಿತ್ತು. ಮನೆಯೊಳಗೇ ಬಾವಿ ಇರುವ, ಪಕ್ಕದಲ್ಲಿಯೇ ಕಲ್ಯಾಣಿ ಇರುವ ಜಾಗಕ್ಕಾಗಿ ಹುಡುಕುತ್ತಿದ್ದೆವು. ನಮ್ಮ ಮನಸ್ಸಿಗೆ ಹೊಂದುವಂಥ ಮನೆ ಇಲ್ಲಿ ಸಿಕ್ಕಿತು. ಹೀಗಾಗಿ ಈ ಮನೆಯನ್ನೇ ಚಿತ್ರೀಕರಣಕ್ಕಾಗಿ ಆಯ್ದುಕೊಂಡೆವು' ಎಂದು ಸುನಿ ವಿವರಿಸುತ್ತಾರೆ. ಹಾಗಾದರೆ ಇದೇನು ಹಾರರ್ ಕಥೆಯೇ ಎಂದು ಕೇಳಿದರೆ 'ಖಂಡಿತ ಅಲ್ಲ' ಎಂದು ತಲೆಯಾಡಿಸುತ್ತಾರೆ. 'ರಾಮಾಯಣ ಮತ್ತು ಮಹಾಭಾರತದ ಹಲವು ಸನ್ನಿವೇಶಗಳು ಹೇಗೆ ನಡೆದಿರಬಹುದು ಎಂಬುದನ್ನು ಕಲ್ಪಿಸಿಕೊಂಡು ಕಟ್ಟಿದ ಕಥೆ ಇದು. ಪಾಪ, ಪುಣ್ಯಗಳ ಕುರಿತು ಈ ಕಥೆ ಇದೆ. ಸಾಕಷ್ಟು ಆಧ್ಯಾತ್ಮಿಕ ಅಂಶಗಳೂ ಸಿನಿಮಾದಲ್ಲಿವೆ' ಎಂಬುದು ಅವರ ವಿವರಣೆ.

ಶೇ. 50 ಚಿತ್ರೀಕರಣ ಈಗಾಗಲೇ ಮುಗಿದಿದೆ. ಕೇರಳದ ನಂತರ ಶೃಂಗೇರಿಯಲ್ಲಿಯೂ ಕೆಲವು ದಿನಗಳ ಚಿತ್ರೀಕರಣಕ್ಕೆ ಯೋಜನೆ ಹಾಕಿಕೊಳ್ಳಲಾಗಿದೆ. ನಂತರ ಮಳೆಗಾಲದಲ್ಲಿ ಮತ್ತೆ ಕೇರಳಕ್ಕೆ ತೆರಳಿ ಇನ್ನೂ ಕೆಲವು ದಿನಗಳ ಚಿತ್ರೀಕರಣ ನಡೆಸಲಾಗುತ್ತದೆಯಂತೆ.

ಚರಣ್‌ರಾಜ್ ಸಂಗೀತ ಸಂಯೋಜಿಸುತ್ತಿದ್ದಾರೆ. 'ರಂಗಿತರಂಗ' ಮತ್ತು 'ರಾಜರಥ' ಸಿನಿಮಾಗಳಿಗೆ ಛಾಯಾಗ್ರಹಣ ಮಾಡಿದ್ದ ವಿಲಿಯಮ್ ಡೇವಿಡ್ ಅವರೇ 'ಅವತಾರ ಪುರುಷ'ನಿಗೂ ಕ್ಯಾಮೆರಾ ಹಿಡಿದಿದ್ದಾರೆ. ಅಕ್ಟೋಬರ್ ತಿಂಗಳಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆಯಲ್ಲಿ ಸುನಿ ಇದ್ದಾರೆ. ■

# ಜಗ್ಗೇಶ್ ವಿತ್ ಪದ್ಮಿನಿ!

ಒಂದೆಡೆ ಲೋಕಸಭೆ ಚುನಾವಣೆಯ ಕಾವಿನಲ್ಲಿ ಜಗ್ಗೇಶ್ ಬೆವರು ಹರಿಸುತ್ತಿದ್ದರೆ ಇನ್ನೊಂದೆಡೆ ಅವರ ನಟನೆಯ 'ಪ್ರೀಮಿಯರ್ ಪದ್ಮಿನಿ' ಸಿನಿಮಾ ಚಿತ್ರಮಂದಿರದೊಳಗೆ ಅಡಿಯಿಡುವ ಸಿದ್ಧತೆಯಲ್ಲಿದೆ. ರಮೇಶ್ ಇಂದಿರಾ ಆ್ಯಕ್ಷನ್ ಕಟ್ ಹೇಳಿರುವ, ಶ್ರುತಿ ನಾಯ್ಡು ನಿರ್ಮಾಣ ಮಾಡಿರುವ ಸಿನಿಮಾ ಇದು. ಕಿರುತೆರೆಯಲ್ಲಿ ಯಶಸ್ಸಿನ ಪತಾಕೆ ನೆಟ್ಟಿರುವ ರಮೇಶ್ ಇಂದಿರಾ ಮತ್ತು ಶ್ರುತಿ ನಾಯ್ಡು ಅವರಿಗೆ ಸಿನಿಮಾ ನಿರ್ದೇಶನ–ನಿರ್ಮಾಣ ಹೊಸದು. ಆದರೆ ಒಳ್ಳೆಯ ತಂಡ ಮತ್ತಷ್ಟೇ ಒಳ್ಳೆಯ ಕಥೆಯ ಮೇಲೆ ಅವರಿಗೆ ನಂಬಿಕೆ ಇದೆ. ಹಾಗಾಗಿಯೇ ಜನರಿಂದ ಸಿಗುವ ಸ್ಪಂದನದ ಕುರಿತೂ ಅವರಿಗೆ ವಿಶ್ವಾಸವಿದೆ.

ಡಬ್ಬಲ್ ಮೀನಿಂಗ್ ಡೈಲಾಗ್, ಜೋಕ್‌ಗಳ ಜನಪ್ರಿಯ 'ಇಮೇಜ್'ನಿಂದ ಆಚೆ ಬಂದು ಸಂಬಂಧಗಳ ಹುಡುಕಾಟದಲ್ಲಿ ತನ್ನನ್ನೇ ನಾನು ಕಂಡುಕೊಳ್ಳುವ ಸದ್ಗೃಹಸ್ಥನ ವೇಷದಲ್ಲಿ ಜಗ್ಗೇಶ್ ಕಾಣಿಸಿಕೊಳ್ಳಲಿದ್ದಾರಂತೆ. ಅವರಿಗೆ ಮಧುಬಾಲ ಜೋಡಿಯಾಗಿರುವುದು ಚಿತ್ರದ ಇನ್ನೊಂದು ವಿಶೇಷ. ಸುಧಾರಾಣಿ, ಪ್ರಮೋದ್, ಜಹಾಂಗೀರ್, ಹಿತಾ ಚಂದ್ರಶೇಖರ್ ಹೀಗೆ ಪ್ರತಿಭಾವಂತ ನಟರ ದಂಡೇ ಚಿತ್ರದಲ್ಲಿದೆ. ಇತ್ತೀಚೆಗಷ್ಟೇ 'ಪ್ರೀಮಿಯರ್ ಪದ್ಮಿನಿ' ಟ್ರೇಲರ್ ಬಿಡುಗಡೆಗೊಂಡಿದೆ. 1.2 ಲಕ್ಷ ವ್ಯೂಸ್ ಪಡೆದುಕೊಂಡಿದೆ. ಟ್ರೇಲರ್‌ನಲ್ಲಿಯೂ ಇದು ಸಂಬಂಧಗಳ ಸಿಕ್ಕುಗಳ ಭಾವುಕ ಕಥನ ಎಂಬುದಕ್ಕೆ ಸಾಕಷ್ಟು ಪುರಾವೆ ಸಿಗುತ್ತದೆ.

ಕಥಾನಾಯಕ 'ಪ್ರೀಮಿಯರ್ ಪದ್ಮಿನಿ' ಕಾರನ್ನು ತನ್ನ ಬಳಿ ಇರಿಸಿಕೊಂಡಿರುತ್ತಾನಂತೆ. ಆ ಕಾರಿನ ಜತೆಗಿನ ಭಾವುಕ ಸಂಬಂಧದ ಕಾರಣದಿಂದ ಹೊಸ ಕಾರು ಕೊಳ್ಳದೆ ಇಟ್ಟುಕೊಳ್ಳುವ ಕಥಾನಾಯಕ, ಬದುಕಿನಲ್ಲಿ ಇಲ್ಲದಿರುವುದ ನೆನೆದು ಏನೆಲ್ಲ ಕಳೆದುಕೊಳ್ಳುತ್ತಾನೆ, ಮತ್ತೆ ಹೇಗೆ ಗಳಿಸಿಕೊಳ್ಳುತ್ತಾನೆ ಎನ್ನುವುದೇ ಕಥೆಯ ಹಂದರವಂತೆ.

ಅರ್ಜುನ್ ಜನ್ಯ ಸಂಗೀತ ಸಂಯೋಜನೆ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಏಪ್ರಿಲ್ 26ರಂದು ತೆರೆಗೆ ತರುವ ಯೋಚನೆಯಲ್ಲಿ ಚಿತ್ರತಂಡ ಸಿದ್ಧತೆಗಳನ್ನು ನಡೆಸುತ್ತಿದೆ. ■



ಚಿತ್ರ: ಕೆ.ಎನ್. ನಾಗೇಶ್ ಕುಮಾರ್